





# ಪ್ರಕೃತಿಯ ಆಭರಣ ನೆಕ್ಲೇಸ್ ಆರ್ಕಿಡ್

■ ವಿದ್ಯಾಲಕ್ಷ್ಮಿ ಮೀಯಾಲ

'ಪ್ರಕೃತಿಯ ನಗುವನ್ನು ಹೂವಿನಲ್ಲಿ ಕಾಣಬಹುದು' ಎನ್ನುವ ಒಂದು ಮಾತಿದೆ. ಆದರೆ ಚಿತ್ರದಲ್ಲಿರುವ ಈ ವನಸುಮವನ್ನು ನೋಡಿದರೆ ಪ್ರಕೃತಿಯು ತನ್ನೊಡಲ ಒಲವನ್ನೆಲ್ಲಾ ತುಂಬಿ ನಗುತ್ತಲೇ ಈ ಹೂವನ್ನು ಸೃಜಿಸಿರಬಹುದೇ ಎಂದು ಯಾರಿಗಾದರೂ ಅನಿಸಿದರೆ ಆಶ್ಚರ್ಯವಿಲ್ಲ. ಈ ಹೂವಿನ ಅಂದಕ್ಕೆ ಮನಸೋತ ಬಾಲೆಯರು ನಸುನಗುತ್ತಲೇ ತಮ್ಮ ಕೊರಳು, ಕಿವಿಯ ಆಭರಣವಾಗಿ ಧರಿಸಿದರೆ ಅಥವಾ ತಮ್ಮ ಮುಡಿಗೇರಿಸಿಕೊಂಡು ಸಂಭ್ರಮಿಸಿದರೆ ಅಚ್ಚರಿಯೇನೂ ಇಲ್ಲ.

ನೆಕ್ಲೇಸ್ ಆರ್ಕಿಡ್ ಅಥವಾ ಫಾಲೋಡೋಟ ಇಂಬ್ರಿಕಾಟ, ರಾಟ್ಲ್ ಸ್ನೇಕ್ ಎನ್ನುವ ಹೆಸರಿನ ಈ ಸಸ್ಯ ಆರ್ಕಿಡ್ ಕುಟುಂಬಕ್ಕೆ ಸೇರಿದೆ. ಸಾಮಾನ್ಯವಾಗಿ ಕಾಡು–ಗುಡ್ಡಗಳಲ್ಲಿ ಇರುವ ವೃಕ್ಷಗಳ ಮೇಲೆ ಕಾಣಿಸಿಕೊಳ್ಳುವ ಈ ಗಿಡವು ತಾನು ಆಶ್ರಯಿಸಿದ ಮರದಿಂದಲೇ ಆಹಾರವನ್ನು ಹೀರಿಕೊಂಡು ವರ್ಷವಿಡೀ ಬದುಕುತ್ತದೆ. ನಮ್ಮೂರಿನಲ್ಲಿ ಜೂನ್ ಕೊನೆಯ ವಾರದಲ್ಲಿ ಮೊಗ್ಗು ಬಿಡಲು ಆರಂಭಿಸಿ, ಜುಲೈ ತಿಂಗಳ ಆರಂಭದಲ್ಲಿ ಅರಳುತ್ತವೆ. ಕೈಯಲ್ಲಿ ಸುಂದರವಾಗಿ ಪೋಣಿಸಿ ಇಟ್ಟಂತೆ ಅರಳಿ ಗಿಡದಿಂದ ಕೆಳಭಾಗಕ್ಕೆ ನೇತಾಡುತ್ತ ನಿಲ್ಲುವ ಹೂ ಮಾಲೆಗಳು ಮುಂದಿನ ಒಂದೆರಡು ತಿಂಗಳಲ್ಲಿ ಆಕರ್ಷಕವಾಗಿ ಕಾಣಿಸುತ್ತ ನೋಡುಗರ ಕಣ್ಮನ ಸೆಳೆಯುತ್ತದೆ.

ಮಕರಂದ ಹೀರುವ ಚಿಟ್ಟೆ, ಜೇನುನೊಣ, ಇನ್ನಿತರ ಅನೇಕ ಕೀಟಗಳು ಹಾಗೂ ಹಕ್ಕಿಗಳನ್ನು ನೆಕ್ಲೇಸ್ ಆರ್ಕಿಡ್‌ಗಳು ಆಕರ್ಷಿಸಿ ಆಹಾರವನ್ನು ಉಣಿಸುತ್ತವೆ. ಹಿಂದೊಮ್ಮೆ ಕಾಡುಮರಗಳಲ್ಲಿ ಅರಳಿ ಪ್ರಕೃತಿಮಾತೆಗೆ ಆಭರಣ ತೊಡಿಸಿದಂತೆ ಎಲ್ಲೆಲ್ಲೂ ಕಾಣಿಸುತ್ತಿದ್ದ ಇಂತಹ ಅನೇಕ ಸುಂದರ ವನ್ಯಪುಷ್ಪಗಳು ಇಂದು ಅರಣ್ಯನಾಶದಿಂದಾಗಿ ಅಪರೂಪವಾಗುತ್ತಿವೆ.

ಪ್ರಕೃತಿ ಮತ್ತು ಮಾನವನ ಸಂಬಂಧ ಅವಿನಾಭಾವ. ಪ್ರಕೃತಿ ಇಲ್ಲದೆ ಮಾನವನಿಲ್ಲ. ಪ್ರಕೃತಿ ನಾಶವಾದರೆ ಮನುಕುಲದ ನಾಶ ಖಂಡಿತ. ಇದನ್ನು ಅರಿತು ಬಾಳುವುದು ತೀರಾ ಅಗತ್ಯ. ಅಂದಹಾಗೆ ಈ ನೆಕ್ಲೇಸ್ ಆರ್ಕಿಡ್ ಧರ್ಮಸ್ಥಳ ಸಮೀಪದ ಕೊಕ್ಕಡದಲ್ಲಿರುವ ನಮ್ಮ 'ಸಹಜ ಫಾರ್ಮ್'ನಲ್ಲಿ ಅರಳಿದ್ದು ನೋಡುಗರನ್ನು ಕೈಬೀಸಿ ಕರೆಯುತ್ತಿದೆ. ■